3. ಈ ಪ್ರಸ್ತಾವನೆಯನ್ನು ಈಗ ವಿಶ್ವಬ್ಯಾಂಕ್ ನೆರವಿಗಾಗಿ ಸಲ್ಲಿಸಲಾಗಿದೆ.

ಹುಬ್ಬಳ್ಳಿ ನಗರದಲ್ಲಿ ನೀರಿನ ಬಿಲ್ಲು ಕುರಿತು.

1481 (2093)

ಶ್ರೀ ಅಶೋಕ ಶಂಕರ ಕಾಟವೆ (ಹುಬ್ಬಳ್ಳಿ): ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ನಗರದಲ್ಲಿ ಈ ಹಿಂದೆ ಪ್ರತಿ ದಿನ ನೀರು ಸರಬರಾಜು ಮಾಡಿದರೂ ಪ್ರತಿ ತಿಂಗಳು ರೂ. 4.00 ಆಕರಣೆ ಮಾಡುತ್ತಿದ್ದು ಈಗ 3 ದಿವಸಕ್ಕೊಮ್ಮೆ ನೀರು ಒದಗಿಸಿದರೂ ಮಹಾನಗರ ಪಾಲಿಕೆಯವರು ರೂ. 40.00 ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಆ) ಒಂದು ದಿವಸ ಬಿಟ್ಟು ಒಂದು ದಿನ ನೀರು ಸರಬರಾಜು ಮಾಡುವ ಉದ್ದೇಶವೇನಾದರೂ ಇದೆಯೇ? ಹಾಗಿದ್ದಲ್ಲಿ ಯಾವಾಗಿನಿಂದ ಮಾಡಲಾಗುವುದು?

ಶ್ರೀ ಮಿರಾಜುದ್ದೀನ್ ಎನ್‌ಪಟೇಲ್(ಪೌರಾಡಳಿತ ರಾಜ್ಯ ಸಚಿವರು):

ಅ) ಬಂದಿದೆ. ದಿನಾಂಕ 15-10-1996 ರೆ ಪೂರ್ವದಲ್ಲಿ ಕನಿಷ್ಠ ನೀರಿನ ಶುಲ್ಕ ರೂ.4.00 ಆಕರಣೆ ಮಾಡಲಾಗುತ್ತಿತ್ತು. ಆದರೆ ಸರ್ಕಾರವು ತನ್ನ ಆದೇಶ ನಂ.ಯುಡಿಡಿ 204 ಯುಎಂಎಸ್ 95, ದಿನಾಂಕ 15-11-96 ರಿಂದ ಗೃಹ ಬಳಕೆ ಉದ್ದೇಶದ ಕನಿಷ್ಠ ನೀರಿನ ದರವನ್ನು ಪ್ರತಿ ತಿಂಗಳು ರೂ.45.00ಗಳಿಗೆ ದಿನಾಂಕ 15-10-96 ರಿಂದ ಪರಿಷ್ಕರಿಸಿದೆ. (ರಾಜ್ಯದಲ್ಲಿ ಎಲ್ಲಾ ಮಹಾನಗರ ಪಾಲಿಕೆಗಳಿಗೆ ಏಕರೂಪವಾಗಿ ಅನ್ವಯಿಸಲಾಗಿದೆ) ನೀರು ಸರಬರಾಜು ಯೋಜನೆ ವೆಚ್ಚ, ಸಾಲದ ಮರುಪಾವತಿ, ಬಡ್ಡಿಯ ಪಾವತಿ ನಿರ್ವಹಣೆ ವೆಚ್ಚ ಇತ್ಯಾದಿ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ. ರಾಜ್ಯ ಸರ್ಕಾರವು ನೀರಿನ ದರಗಳನ್ನು ಮೇಲೆ ಹೇಳಿದಂತೆ ಪರಿಷ್ಕರಿಸಿದ್ದು, ಅವುಗಳನ್ನು ಅನುಷ್ಠಾನಗೊಳಿಸಲಾಗಿದೆ.

ಆ) ಇದೆ. ನೀರ-ಸಾಗರ ಹಾಗೂ ಮಲಪ್ರಭಾ ಜಲಾಶಯಗಳಲ್ಲಿ ಸಾಕಷ್ಟು ನೀರು ಸಂಗ್ರಹವಾದ ನಂತರ ದಿನ ಬಿಟ್ಟು ದಿನ ನೀರನ್ನು ಪೂರೈಸಲು ಕ್ರಮ ಕೈಗೊಳ್ಳಲಾಗುವುದು. ನೀರು ಸರಬರಾಜು ಮಾಡುವ ಬಗ್ಗೆ ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಮುಖಾಂತರ ಕೈಗೊಳ್ಳಲಾಗುವುದು.